ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

B.M.R.C.Lನಲ್ಲಿ ರೈಲ್ವೆ ನಿಲ್ದಾಣಗಳ ಬಗ್ಗೆ

ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

361 (451) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮೆಟ್ರೋ ರೈಲ್ವೆ ನಿಗಮ (B.M.R.C.L) ದಲ್ಲಿ ಎಷ್ಟು ರೈಲು ನಿಲ್ದಾಣಗಳಿವೆ; ಇವುಗಳಿಗೆ ಯಾವ ಹೆಸರುಗಳನ್ನು ಇಡಲಾಗಿದೆ; ಹೆಸರುಗಳನ್ನು ನೀಡಲು ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ; (ವಿವರವಾದ ಮಾಹಿತಿ ನೀಡುವುದು)

(ಆ) ಗ್ರೌಟಿಂಗ್ (Grouting) ಎಂದರೇನು; ಮೆಟ್ರೋ ರೈಲಿನ ಪಥದಲ್ಲಿ ಎಷ್ಟು ಪಿಲ್ಲರ್‌ಗಳಿವೆ; ಇವುಗಳ ಸರಾಸರಿ ಆಯಸ್ಸು ಎಷ್ಟು;

(ಇ) ಎಷ್ಟು ಪಿಲ್ಲರ್‌ಗಳಿಗೆ ಈಗಾಗಲೇ ಗ್ರೌಟಿಂಗ್ ಮಾಡಲಾಗಿರುತ್ತದೆ; ಒಂದು ಪಿಲ್ಲರ್‌ಗೆ ತಗಲುವ ವೆಚ್ಚವೆಷ್ಟು; ಇದರ ಸಂಬಂಧ ಎಷ್ಟು ಹಣ ಖರ್ಚು ಮಾಡಲಾಗಿದೆ; ಗ್ರೌಟಿಂಗ್ ಕಾಮಗಾರಿ ಮಾಡಿರುವ ಏಜೆನ್ಸಿ ಯಾರು; ಗ್ರೌಟಿಂಗ್ ಮಾಡುವ ಅವಶ್ಯಕತೆ ಇತ್ತೆ ? (ಸಂಪೂರ್ಣ ವಿವರವಾದ ಮಾಹಿತಿ ನೀಡುವುದು)